BN-8

# ನಕಲಿ ಕೊಡುಗೆಗಳು/ಲಾಟರಿ ಗೆಲ್ಲುವುದು/ಅಗ್ಗದ ಫಂಡ್ ಕೊಡುಗೆಗಳಿಗಾಗಿ ಅಗ್ಗದ ಹಣ ಕಳುಹಿಸುವ ನಕಲಿ ಕೊಡುಗೆಗಳ ವಿರುದ್ಧ ಸಾರ್ವಜನಿಕರಿಗೆ ಆರ್‌ಬಿಐ ನೀಡುವ ಎಚ್ಚರಿಕೆ

ಭಾರತೀಯ ರಿಜರ್ವ್ ಬ್ಯಾಂಕ್ ಮೇ 26, 2010 ರಂದು ಬ್ಯಾಂಕುಗಳಿಗೆ ನಕಲಿ ಕೊಡುಗೆಗಳಿಗೆ ಸಂಬಂಧಿಸಿದಂತೆ ಎಚ್ಚರಿಕೆಯ ಕ್ರಮ ಕೈಗೊಳ್ಳಲು ಮತ್ತು ಬ್ಯಾಂಕ್ ಖಾತೆಯನ್ನು ತೆರೆಯುವಾಗ ಮತ್ತು / ಅಥವಾ ಬಹುಮಾನದ ಹಣ/ಪ್ರಶಸ್ತಿ ಹಣ ಮುಂತಾದ ಹಣದ ವರ್ಗಾವಣೆಗಾಗಿ ಇಂಥಹ ಹಣವನ್ನು ವಹಿವಾಟು ಶುಲ್ಕ ಮುಂತಾದ ರೂಪಗಳಲ್ಲಿ ಪಡೆಯುವಾಗ ಈ ವಿಷಯದಲ್ಲಿ ಅತ್ಯಂತ ಎಚ್ಚರಿಕೆಯನ್ನು ವಹಿಸಲು ಮತ್ತು ಅತಿ ಜಾಗರೂಕರಾಗಿರುವಂತೆ ಸೂಚನೆಯನ್ನು ನೀಡಿದೆ. ಭಾರತದ ನಿವಾಸಿ ಇಂಥಹ ಪಾವತಿಗಳನ್ನು ಪ್ರತ್ಯಕ್ಷವಾಗಿ/ ಪರೋಕ್ಷವಾಗಿ ಭಾರತದಲ್ಲಿ ಸಂಗ್ರಹಿಸುವುದಾಗಲಿ ಅಥವಾ ಹೊರಗಡೆ ಕಳುಹಿಸುವುದರಲ್ಲಾಗಲಿ ತೊಡಗಿಕೊಂಡಿರುವುದಾಗಿ ಕಂಡು ಬಂದಲ್ಲಿ ಅಂಥವರ ವಿರುದ್ಧ ವಿದೇಶಿ ವಿನಿಮಯ ನಿರ್ವಹಣಾ ಕೂನೂನು, 1999 ರ ವಿರುದ್ಧವಾಗಿದೆಯೆಂದು ಪ್ರಕರಣವನ್ನು ನಡೆಸಲಾಗುವುದೆಂದು ಮತ್ತು ಅಂಥವರು ನೊ ಯುವರ್ ಕಸ್ಟಮರ್ (ಕೆವೈಸಿ) ನಿಯಮಾವಳಿಗಳು/ಆ್ಯಂಟಿ ಮನಿ ಲಾಂಡರಿಂಗ್(ಎಎಮ್‌ಎಲ್) ಮಾನಕಕ್ಕೆ ಒಳಪಡುವರೆಂದು ಆರ್‌ಬಿಐ ಸ್ಪಷ್ಟಪಡಿಸುತ್ತಿದೆ.

ವಿದೇಶಿ ವಿನಿಮಯ ನಿರ್ವಹಣಾ ಕಾನೂನು, 1999 ಲಾಟರಿ ಯೋಜನೆಯಲ್ಲಿ ಯಾವುದೇ ರೂಪದಲ್ಲಿ ಭಾಗವಹಿಸುವುದನ್ನು ನಿಷೇಧಿಸುವುದಾಗಿ ಕೂಡ ಆರ್‌ಬಿಐ ಒತ್ತಿ ಹೇಳುತ್ತದೆ. ಈ ನಿಷೇಧಗಳು ಹಣ ಚಲಾವಣೆ ಯೋಜನೆಯಂಥ ಯಾವುದೇ ಬೇರೊಂದು ಹೆಸರಿನಲ್ಲಿ ಅಸ್ತಿತ್ವದಲ್ಲಿರುವ ಲಾಟರಿ ಸ್ಕೀಮ್‌ನಲ್ಲಿ ಭಾಗವಹಿಸಿ ಹಣ ಕಳುಹಿಸುವುದನ್ನು ಅಥವಾ ಬಹುಮಾನ/ಪ್ರಶಸ್ತಿ ಮುಂತಾದವುಗಳನ್ನು ಪಡೆಯಲು ಹಣ ಕಳುಹಿಸುವುದಕ್ಕೆ ಅನ್ವಯಿಸುತ್ತವೆ.

ರಿಜರ್ವ್ ಬ್ಯಾಂಕ್ ಬ್ಯಾಂಕುಗಳಿಗೆ ಕಳುಹಿಸಿದ ಸುತ್ತೋಲೆಯಲ್ಲಿ, ಮೋಸಗಾರರಿಂದ ಇತ್ತೀಚಿನ ದಿನಗಳಲ್ಲಿ ಅಗ್ಗದ ಫಂಡ್‌ಗಳ ನಕಲಿ ಕೊಡುಗೆಗಳ ಮಹಾಪೂರವೇ ಬರುತ್ತಿದೆ ಎಂದು ಹೇಳಿದೆ. ಇವು ಪತ್ರಗಳು, ಇ-ಮೇಲ್, ಮೊಬೈಲ್ ಫೋನ್, ಎಸ್‌ಎಮ್‌ಎಸ್ ಮುಂತಾದವುಗಳ ಮೂಲಕ ಬರುತ್ತಿವೆ. ಇಂಥಹ ಮೋಸದ ಮಾರ್ಗಗಳನ್ನು ವಿವರಿಸುತ್ತ , ರಿಜರ್ವ್ ಬ್ಯಾಂಕಿನ ನಕಲಿ ಲೆಟರ್ ಹೆಡ್‌ನಲ್ಲಿ ಮತ್ತು ಉಚ್ಚ ಕಾರ್ಯಕಾರಿ ಅಧಿಕಾರಿಗಳು/ಹಿರಿಯ ಅಧಿಕಾರಿಗಳ ಸಹಿ ಹೊಂದಿದ ಪತ್ರಗಳನ್ನು ಜನರಿಗೆ ಕಳುಹಿಸಲಾಗುತ್ತದೆ ಎಂದು ಕೂಡ ರಿಜರ್ವ್ ಬ್ಯಾಂಕ್ ಹೇಳಿದೆ. ಹಲವಾರು ಜನರು ಇಂಥ ಮೋಸದ ಕೊಡುಗೆಗಳಿಗೆ ಬಲಿಪಶುಗಳಾಗಿದ್ದಾರೆ ಮತ್ತು ಈ ಪ್ರಕ್ರಿಯೆಯಲ್ಲಿ ಭಾರಿ ಮೊತ್ತದ ಹಣವನ್ನು ಕಳೆದುಕೊಂಡಿದ್ದಾರೆ. ಈ ಮೋಸಗಾರರು ಅಮಾಯಕ ಜನರಿಂದ ಸಂಸ್ಕರಣ ಶುಲ್ಕ/ ವ್ಯವಹಾರ ಶುಲ್ಕ/ ಟ್ಯಾಕ್ಸ್ ಕ್ಲಿಯರನ್ಸ್ ಚಾರ್ಜಸ್/ಪರಿವರ್ತನ ಶುಲ್ಕ, ಕ್ಲಿಯರಿಂಗ್ ಶುಲ್ಕ ಮುಂತಾದವುಗಳಂಥ ವಿವಿಧ ತಲೆ ಬರಹದಡಿಯಲ್ಲಿ ಹಣವನ್ನು ಕೇಳಿರುವುದಾಗಿ ಕೂಡ ರಿಜರ್ವ್ ಬ್ಯಾಂಕಿನವರ ಗಮನಕ್ಕೆ ಬಂದಿದೆ. ಈ ಮೋಸಗಾರರು ವ್ಯವಹಾರ ಶುಲ್ಕ ಇತ್ಯಾದಿಗಳನ್ನು ವಸೂಲಿ ಮಾಡಲು ಬೇರೆ ಬೇರೆ ಬ್ಯಾಂಕುಗಳ ಶಾಖೆಗಳಲ್ಲಿ ವ್ಯಕ್ತಿಗಳು ಅಥವಾ ಮಾಲಿಕ ಸಂಸ್ಥೆಗಳ ಹೆಸರುಗಳಲ್ಲಿ ವಿವಿಧ ಖಾತೆಗಳನ್ನು ತೆರೆಯುತ್ತಾರೆ. ಅಮಾಯಕ ಜನರಿಗೆ ಈ ಖಾತೆಗಳಲ್ಲಿ ಒಂದು ನಿರ್ದಿಷ್ಟ ಮೊತ್ತದ ಹಣವನ್ನು ತುಂಬುವಂತೆ ಪುಸಲಾಯಿಸುತ್ತಾರೆ. ಆ ಮೊತ್ತವನ್ನು ತಕ್ಷಣ ಹಿಂಪಡೆದುಕೊಂಡು ಅಮಾಯಕ ಜನರಿಗೆ ಚಳ್ಳೆ ಹಣ್ಣು ತಿನ್ನಿಸುತ್ತಾರೆ.

ರಿಜರ್ವ್ ಬ್ಯಾಂಕು ಇಂಥಹ ನಕಲಿ ಯೋಜನೆಗಳು/ ಕೊಡುಗೆಗಳ ಬಗ್ಗೆ ಮುದ್ರಣ ಹಾಗೂ ಇಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಈ ಹಿಂದೆ ಹಲವಾರು ಬಾರಿ ಸಾರ್ವಜನಿಕರಿಗೆ ಎಚ್ಚರಿಕೆಯನ್ನು ಕೊಟ್ಟಿದೆ. ಗ್ರಾಹಕರು ಈ ವಿಷಯದ ಬಗ್ಗೆ www.hdfcbank.com ರೆಮಿಟನ್ಸ್ ವಿಭಾಗದಲ್ಲಿಯ ಪತ್ರಿಕಾ ಪ್ರಕಟಣೆಯನ್ನು ನೋಡಬಹುದು.

Validity : Permanent
Ver : BN8_V1.0_Sep11

ಎಚ್ ಡಿ ಎಫ್ ಸಿ ಬ್ಯಾಂಕ್

ನಾವು ನಿಮ್ಮ ವಿಶ್ವವನ್ನು ಅರಿತಿದ್ದೇವೆ